**ನಾನೊಬ್ಬ ಕ್ರಾಂತಿಕಾರಿ ಏನೋ ಹೌದು, ಆದರೆ ಖಂಡಿತ ಕೊಲೆಗಾರನಂತೂ ಅಲ್ಲ! ಅವನನ್ನು ಕೊಲ್ಲುವುದು ದೊಡ್ಡ ಕೆಲಸವಲ್ಲ. ಅಲ್ಲದೆ ಅದು ಖಂಡಿತವಾಗಿಯೂ ಪಾಪವಾಗಿರಲಿಕ್ಕಿಲ್ಲ. ಆದರೆ ಅವನನ್ನು ಕೊಂದು ನನಗೆ ಆಗಬೇಕಾಗಿರುವುದಾದರೂ ಏನು? ಅವನನ್ನು ಕೊಂದರೆ ಮತ್ತೊಬ್ಬ ಅವನ ಜಾಗಕ್ಕೆ ಬರುತ್ತಾನೆ... ಮತ್ತೂ ಒಬ್ಬ...**

ಬರಬಾರದಿತ್ತೆಂದು ನನಗನಿಸಿತು. ಅವನು ನನ್ನ ಅಂಗಡಿಗೆ ಬಂದಿರುವುದನ್ನು ನಮ್ಮ ಕಡೆಯವರು ಖಂಡಿತಾ ನೋಡಿರುತ್ತಾರೆ. ವೈರಿಯೊಬ್ಬ ನನ್ನ ಮನೆಯೊಳಗೇ ಬಂದಿರುವಾಗ ನನ್ನ ಜವಾಬ್ದಾರಿಯೂ ಹೆಚ್ಚುತ್ತದೆ ಅಲ್ಲವೇ? ಬೇರೆ ಗಿರಾಕಿಗಳ ಗಡ್ಡ ಹೆರೆದಷ್ಟೇ ಪ್ರಾಮಾಣಿಕವಾಗಿ, ಅವನ ಕೆನ್ನೆಯಿಂದ ಒಂದು ಸಣ್ಣ ಬಿಂದೂ ರಕ್ತ ಹೊರಬರದಂತೆ ಹೆರೆಯುವುದು ನನ್ನ ವೃತ್ತಿ ಧರ್ಮ. ಎಲ್ಲಾ ಮುಗಿಸಿ ಆ ಕೆನ್ನೆಗಳ ಮೇಲೆ ಕೈಯಾಡಿಸಿದಾಗ ಮಗುವಿನ ಗಲ್ಲದ ಹಾಗೆ ಮೃದುವಾಗಿ ನುಣುಪಾಗಿಸುವುದು ಅತ್ಯವಶ್ಯಕ. ನಿಜ, ನಾನೊಬ್ಬ ಗುಪ್ತ ಕ್ರಾಂತಿಕಾರಿ. ಹಾಗೆಯೇ ಒಬ್ಬ ವೃತ್ತಿನಿರತ ಕ್ಷೌರಿಕ ಕೂಡ. ಅವನ ನಾಲ್ಕು ದಿನಗಳ ಗಡ್ಡ ನನ್ನ ವೃತ್ತಿ ನೈಪುಣ್ಯಕ್ಕೆ ಪಣವೊಡ್ಡಿತ್ತು. ನಾನು ನನ್ನ ನೆಚ್ಚಿನ ಕ್ಷೌರದ ಕತ್ತಿಯನ್ನು ಪೂರ್ಣವಾಗಿ ಬಿಚ್ಚಿದೆ. ಕನ್ನೆಯ ಒಂದು ಭಾಗದಿಂದ, ಮೇಲಿಂದ ಕೆಳಭಾಗಕ್ಕೆ ಕತ್ತಿಯನ್ನು ಸರಿಸಿದೆ. ಮಸೆದು ತಯಾರಾಗಿದ್ದ ಕತ್ತಿ, ಕರ ಕರ ಶಬ್ದ ಮಾಡಿದರೂ ಯಾವುದೇ ರಗಳೆಗಳನ್ನು ಕೊಡದೆ ಬೆಣ್ಣೆಯಿಂದ ಕೂದಲು ಎಳೆದಂತೆ ನುಣುಪಾಗಿ ಹರಿಯಿತು. ಕ್ಯಾಪ್ಟನ್ ಟೋರೆಸನ ನಾಲ್ಕುದಿನಗಳ ಗಡ್ಡ ಜಾಸ್ತಿ ಉದ್ದವಿರಲಿಲ್ಲವಾದರೂ ಒರಟಾಗಿಯೇ ಇತ್ತು. ಕ್ರಮೇಣ ಕ್ಯಾಪ್ಟನ್ ಟೋರೆಸನ ಚರ್ಮ ಕಾಣಿಸತೊಡಗಿತು. ಕ್ಯಾಪ್ಟನನ ಮುಖ ಕ್ಷೌರದ ಮೊದಲ ಸುತ್ತು ಮುಗಿಸಿ ನಾನು ಮತ್ತೊಮ್ಮೆ ಕತ್ತಿಯನ್ನು ಮಸೆಯುತೊಡಗಿದೆ. ಅವನು ಮೆಲ್ಲಗೆ ಕಣ್ಣು ತೆರೆದು ಹೊಚ್ಚಿದ್ದ ಬಿಳಿ ಹೊದಿಕೆಯಿಂದ ಕೈಯನ್ನು ಹೊರತೆಗೆದು ಕೆಲ ಗಳಿಗೆ ಕೆನ್ನೆಗಳ ಮೇಲೆ ಸವರುತ್ತಾ, "ಇವತ್ತು ಸಂಜೆ ಆರು ಗಂಟೆಗೆ ಶಾಲಾ ಮೈದಾನದ ಬಳಿ ಬಾ. ಮರೆಯಬೇಡ." ಎಂದ.

"ಕಳೆದ ಸಲದ ಹಾಗೆಯೇ ಇರುವುದೇ ಸರ್?" ನನ್ನ ಮೈ ತಣ್ಣಗಾಯಿತು.

"ಅದಕ್ಕಿನ್ನ ಹೆಚ್ಚು ಮಜವಾಗಿರುತ್ತೆ ಕಣಯ್ಯ!"

"ಏನು ವಿಶೇಷ ಯೋಜಿಸಿದ್ದೀರಿ ಸರ್?"

"ಇನ್ನೂ ಯೋಚಿಸಿಲ್ಲ ಕಣಯ್ಯ. ಕಳೆದ ಬಾರಿಗಿಂತ ವಿಶೇಷವಾಗಿರುವುದಂತೂ ನಿಜ." ಎನ್ನುತ್ತಾ ಅವನು ಕುರ್ಚಿಗೊರಗಿ ಕಣ್ಣು ಮುಚ್ಚಿದ.

ಕ್ಷೌರದ ಕತ್ತಿಯನ್ನು ಮೇಲೆತ್ತಿ ನಾನು ಅವನ ತೀರಾ ಸನಿಹಕ್ಕೆ ಬಂದೆ.

"ಅವರೆಲ್ಲರನ್ನೂ ಶಿಕ್ಷಿಸುತ್ತೀರಾ ಸರ್?" ನಾನು ಕೊಂಚ ಅಳುಕಿನಿಂದಲೇ ಕೇಳಿದೆ. ಸೋಪು ಅವನ ಮುಖದ ಮೇಲೆ ಒಣಗುತ್ತಿತ್ತು.

"ಹೂಂ... ಎಲ್ಲರನ್ನೂ!" ಅವನು ಕಣ್ಣು ಮುಚ್ಚಿಕೊಂಡೇ ಉತ್ತರಿಸಿದ.

ನಾನೀಗ ಇದನ್ನು ಆದಷ್ಟು ಬೇಗನೇ ಮುಗಿಸಬೇಕು. ಕನ್ನಡಿಯಿಂದ ನಾನು ಹೊರಗೆ ಬೀದಿಯ ಕಡೆಗೆ ದೃಷ್ಟಿ ಹರಿಸಿದೆ. ಎಂದಿನಂತೆಯೇ ಇತ್ತು. ಹೊರಗೆ ದಿನಸಿ ಅಂಗಡಿಯಲ್ಲಿ ಎರಡೋ ಮೂರೋ ಗಿರಾಕಿಗಳು ಕಾಣಿಸುತ್ತಿದ್ದರು. ಗಡಿಯಾರವನ್ನೊಮ್ಮೆ ದಿಟ್ಟಿಸಿದೆ: ಎರಡು ಮೂವತ್ತು. ಕ್ಷೌರದ